1111 (1140) ಶ್ರೀ ಧ್ರುವನಾರಾಯಣ ಆರ್. (ವಿಧಾನಸಭಾ ಸದಸ್ಯರು)(ಸಂತೇಮಾರಳ್ಳಿ): ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಂಬಾಲಪಲ್ಲಿ ದಲಿತರ ಹತ್ಯಾಕಾಂಡ ಪ್ರಕರಣ ಮರುವಿಚಾರಣೆ ಅರ್ಜಿಯನ್ನು ಸರ್ಕಾರದ ವತಿಯಿಂದ ಸಲ್ಲಿಸಲಾಗಿದೆಯೇ ;

ಆ) ಇನ್ನೂ ಸಲ್ಲಿಸಲಾಗದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಮರುವಿಚಾರಣೆ ಅರ್ಜಿಯನ್ನು ಸಲ್ಲಿಸಲಾಗುವುದು ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):–

ಅ) ಹೌದು. ಬೆಂಗಳೂರಿನ ಘನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ 16–01–2007 ರಂದೇ ಮೇಲ್ಮನವಿಯನ್ನು ದಾಖಲಿಸಲಾಗಿದೆ.

ಆ) –

ಮೀಸಲಾತಿ ಆದೇಶಗಳ ಕೈಪಿಡಿ ಪೂರೈಕೆ

1112 (1336) ಶ್ರೀ ಧ್ರುವನಾರಾಯಣ ಆರ್. (ವಿಧಾನಸಭಾ ಸದಸ್ಯರು)(ಸಂತೇಮಾರಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸರ್ಕಾರ ಕಾಲಕಾಲಕ್ಕೆ ಹೊರಡಿಸಿದ ಮೀಸಲಾತಿ ಆದೇಶಗಳ ಕೈಪಿಡಿಯನ್ನು ಅಚ್ಚು ಮಾಡಿಸಿ, ಸರ್ಕಾರದ ಪುಸ್ತಕ ಮಳಿಗೆ ವತಿಯಿಂದ ಮಾರಾಟಕ್ಕೆ ಬಿಡುಗಡೆ ಮಾಡಲಾಗುತ್ತಿತ್ತು ಎಂಬುದು ನಿಜವೇ ;

ಆ) ಈಗ ಇಂತಹ ಕೈಪಿಡಿ ಮಾರಾಟಕ್ಕೆ ಲಭ್ಯವಿದೆಯೇ ;

ಇ) ಲಭ್ಯವಿಲ್ಲದಿದ್ದಲ್ಲಿ, ಅಚ್ಚುಮಾಡಿಸಿ ಎಷ್ಟು ದಿನಗಳಲ್ಲಿ ಈ ಕೈಪಿಡಿಯನ್ನು ಮಾರಾಟಕ್ಕೆ ಬಿಡುಗಡೆ ಮಾಡಲಾಗುವುದು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು):–

ಅ) ಹಿಂದುಳಿದ ವರ್ಗಗಳ ಇಲಾಖಾ ವತಿಯಿಂದ 1982ನೇ ಸಾಲಿನವರೆಗೆ ಮೀಸಲಾತಿ ಆದೇಶಗಳ ಕೈಪಿಡಿಯನ್ನು ಅಚ್ಚು ಮಾಡಿಸಲಾಗಿದೆ.

ಆ) 1982ರವರೆಗಿನ ಕೈಪಿಡಿ ಸರ್ಕಾರದ ಪುಸ್ತಕ ಮಳಿಗೆಯಲ್ಲಿ ಲಭ್ಯವಿರುವುದಿಲ್ಲ.

ಇ) 1982ರ ನಂತರದ ಮೀಸಲಾತಿ ಆದೇಶಗಳ ಕೈಪಿಡಿಯನ್ನು ಸಿದ್ದಪಡಿಸುವ